

# ತೇಲುವ ಕಾಲು ದಾರಿ

ತುಂಬಿ ಹರಿಯುವ ನದಿಯ ಮೇಲೆ ಮರದ ಹಲಗೆಗಳಿಂದ ಹಾದಿ ನಿರ್ಮಿಸಿ ಅದರಲ್ಲಿ ನಡೆದಾಡುವವರಿಗೆ ಅನನ್ಯವಾದ ರೋಚಕ ಅನುಭವ ನೀಡಿದ್ದಾರೆ ಚೀನಾ ದೇಶದ ತಂತ್ರಜ್ಞರು. 2016ರಲ್ಲಿ ನದಿಯ ಮೇಲೆ ನಡಿಗೆಯ ಸಂತಸ ನೀಡಲು ತೆರೆದುಕೊಂಡ ಹಾದಿಯ ಉದ್ದವು ಸಣ್ಣದಲ್ಲ, ಬರೋಬ್ಬರಿ 1640 ಅಡಿ ಉದ್ದವಾಗಿದ್ದು ಮಳೆ, ಬಿಸಿಲು ಮತ್ತು ನದಿಯ ನೀರಿನಿಂದ ಧಕ್ಕೆಯಾಗದಂತಹ ದೃಢವಾದ ಮರದಿಂದ ಇದನ್ನು ನಿರ್ಮಿಸಲಾಗಿದೆ. ಅದಕ್ಕಾಗಿ ಹಲವು ಲಕ್ಷ ಡಾಲರ್ ಹಣವೂ ವೆಚ್ಚವಾಗಿದೆ. ಸೇತುವೆಯಂತಿರುವ ಹಾದಿಯಲ್ಲಿ ನಡೆದಾಡಲು ಪ್ರವೇಶ ಶುಲ್ಕವನ್ನು ಕೊಡಬೇಕು.

ಹುಬೈ ಪ್ರಾಂತದ ಶಿಜಿಗಾನ್ ಪ್ರದೇಶದಲ್ಲಿರುವ ಕಾನಾನ್ ನದಿಯ ಮೇಲೆ ಇಂತಹ ಮರದ ಹಾದಿಯಿದೆ. ನೀಲ ವರ್ಣದ ನದಿಯ ನೀರು, ಅಕ್ಕಪಕ್ಕದಲ್ಲಿರುವ ದಟ್ಟವಾದ ಹಸಿರಿನ ಮರಗಳ ತಂಪು ಕಡು ಬಿಸಿಲಿನ ಬೇಸಗೆಯಲ್ಲಿ ಹಿತಕರವಾಗಿದೆ ನದಿಯ ವಾತಾವರಣ. ಸೆಕೆಯಿಂದ ಬಳಲುವ ಹೆಂಗಸರು, ಮಕ್ಕಳಿಗೆ ಈ ಯಾನ ತುಂಬ ಖುಷಿ ಕೊಡುತ್ತದೆ. ಹಾದಿಯ ಎರಡೂ ಬದಿಗಳನ್ನು ಇಕ್ಕಡೆಯ ದಂಡೆಗಳಲ್ಲಿ ಬಿಗಿದು ಕಟ್ಟಿದ್ದಾರೆ. ನದಿಯಲ್ಲಿ ನೀರು ಅಧಿಕವಿರುವಾಗ ದೋಣಿಯ ಹಾಗೆ ಮರದ ಹಾದಿಯೂ ತೇಲುತ್ತಿರುವ ಸುಂದರ ಅನುಭವ ಕೊಡುತ್ತದೆ. ಕಮಾನಿನಂತೆ ಬಾಗಿರುವ ಹಾದಿಯಲ್ಲಿ ಕೆಲವು ತಿರುವುಗಳೂ ಇವೆ. ನದಿಯ ನೀರು ಇಳಿಮುಖವಾಗಿರುವಾಗ ಹಾದಿ ನೀರಿನಿಂದ ಕೊಂಚ ಮೇಲೆ ನಿಲ್ಲುತ್ತದೆ.

ಮಳೆಗಾಲದಲ್ಲಂತೂ ನೀರ ಮೇಲೆ ಅದು ತೇಲುತ್ತಿರುವಾಗ ನಡೆದಾಡುವಾಗ ಸಿಗುವ ಖುಷಿಯೇ ಬೇರೆ. ಮುಳುಗುವ ಭಯ ಖಂಡಿತ ಇಲ್ಲ. ನದಿಗೆ ಇಷ್ಟು ದೊಡ್ಡ ಮರದ ಹಾದಿಯ ನಿರ್ಮಾಣ ಚೀನಾದೇಶದ ಒಂದು ದಾಖಲೆಯೂ ಹೌದು.



■ ಪ. ರಾಮಕೃಷ್ಣ ಶಾಸ್ತ್ರಿ